## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ, ಇವರು ನಿಯಮ 330 ರಡಿ ನೀಡಿರುವ ಸೂಚನೆಗೆ ಉತ್ತರ

### ಸೂಚನೆ

ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ (Society) ಆಡಳಿತ ಮಂಡಳಿಯ ಅಕ್ರಮಗಳು ಹಾಗೂ ಸುಮಾರು ರೂ. 644.00 ಕೋಟಿಗಳ ಆರ್ಥಿಕ ನಷ್ಟದಿಂದ ಸದರಿ ಸೊಸೈಟಿಯು ಅತಂತ್ರದ ಸ್ಥಿತಿಯಲ್ಲಿದೆ. ಈ ಸಂಘವು 3000ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದು, 2005ರಲ್ಲಿ ಸುಮಾರು 1703 ಸದಸ್ಯರು ತಮ್ಮ ಜೀವಮಾನದ ಉಳಿತಾಯವನ್ನು ನಿವೇಶನಕ್ಕಾಗಿ ಸಂಘಕ್ಕೆ ಪಾವತಿಸಿದ್ದಾರೆ. ಆದರೆ, ದಶಕಗಳು ಕಳೆದರೂ ಸದಸ್ಯರಿಗೆ ನಿವೇಶನ ಸಿಗದೆ ಅನ್ಯಾಯವಾಗಿದೆ. ಸಂಘವು 2005ರಲ್ಲಿ M/s S.P.R Developers Private Limited ನೊಂದಿಗೆ 126 ಎಕರೆ 26 ಗುಂಟೆ ಭೂಮಿಯ ಅಭಿವೃದ್ಧಿಗೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಇದರಲ್ಲಿ 56 ಎಕರೆ 21 ಗುಂಟೆ ಭೂಮಿಯು ವಿವಾದಾತ್ಮಕವಾಗಿರುವುದು ಕಂಡುಬಂದಿದೆ. ದಿನಾಂಕ: 25-04-2013 ರ ಆರ್ಬಿಟ್ರೇಷನ್ ತೀರ್ಪಿನಂತೆ, ಡೆವಲಪರ್ಸ್ ಸಂಸ್ಥೆಯು ಸಂಘಕ್ಕೆ ರೂ. 185.00 ಕೋಟಿಗಳನ್ನು ವಾರ್ಷಿಕ 13.5% ಬಡ್ಡಿಯೊಂದಿಗೆ ಪಾವತಿಸಬೇಕಿತ್ತು. ಪ್ರಸ್ತುತ ಈ ಮೊತ್ತವು ಬಡ್ಡಿಯೂ ಸೇರಿ ಅಂದಾಜು ರೂ. 644.00 ಕೋಟಿಗಳಷ್ಟು ಬೃಹತ್ ಮೊತ್ತವಾಗಿದೆ. ಇದನ್ನು ವಸೂಲಿ ಮಾಡುವಲ್ಲಿ ಪ್ರಸ್ತುತ ಆಡಳಿತ ಮಂಡಳಿಯು ವಿಫಲವಾಗಿದ್ದು, ಸದಸ್ಯರ ಹಿತಾಸಕ್ತಿಯನ್ನು ಬಲಿಗೊಟ್ಟಿದೆ. ಬೆಂಗಳೂರು ನಗರದ ಪ್ರಮುಖ ಸಹಕಾರ ಸಂಸ್ಥೆಗಳಲ್ಲಿ ಒಂದಾದ ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ (Society) ನಡೆಯುತ್ತಿರುವ ಗಂಭೀರ ಸ್ವರೂಪದ ಆಡಳಿತಾತ್ಮಕ ಅಕ್ರಮಗಳು ಮತ್ತು ಸಾವಿರಾರು ಸದಸ್ಯರಿಗೆ ಆಗುತ್ತಿರುವ ವಂಚನೆಯ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

### ಉತ್ತರ

ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬಿಳೇಕಹಳ್ಳಿ, ಬೆಂಗಳೂರು ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೋಂದಣಿ ಕ್ರಮಾಂಕ ಎಆರ್‌ಬಿ1/ಆರ್‌ಇಜಿಎನ್/2811/73-74 ದಿನಾಂಕ:08-01-1974 ರ ಪ್ರಕಾರ ನೋಂದಣಿಯಾಗಿರುತ್ತದೆ.

ಪ್ರಸ್ತುತ, ಸಂಘದ ಕಾರ್ಯವ್ಯಾಪ್ತಿಯು ಪ್ರಾಂತೀಯ ಮಟ್ಟದ್ದಾಗಿದ್ದು ಈ ಸಂಘದ ಅಧಿಕಾರ ವ್ಯಾಪ್ತಿಯ ನಿಬಂಧಕರು (jurisdictional registrar) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರು ಸಕ್ಷಮ ಪ್ರಾಧಿಕಾರವಾಗಿದ್ದಾರೆ.

ಈ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಶ್ರೀ ಕೋಡಿ ನಾಗಪ್ಪ ಮತ್ತು ಶ್ರೀ ಎಂ.ಹೆಚ್. ಪಡಿವಾಳ್ ರವರು ಸಲ್ಲಿಸಿದ ದೂರು ಅರ್ಜಿಗಳಲ್ಲಿ ಉಲ್ಲೇಖಿಸಿದ ಆರೋಪಗಳಿಗೆ ಸಂಬಂಧಪಟ್ಟಂತೆ ವಾಸ್ತವಾಂಶವನ್ನು ಅರಿಯಲು ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 65 ರಡಿಯಲ್ಲಿ ಪರಿವೀಕ್ಷಣೆ ನಡೆಸಲು ದಿನಾಂಕ:12-07-2022 ರಂದು ಬೆಂಗಳೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರು ಆದೇಶಿಸಿದ್ದರು. ಪರಿವೀಕ್ಷಣಾಧಿಕಾರಿಯು ಪ್ರಕರಣ 65 ರ ಪರಿವೀಕ್ಷಣಾ ವರದಿಯನ್ನು ದಿನಾಂಕ:19-05-2023 ರಂದು ಸಲ್ಲಿಸಿದ್ದಾರೆ.

ಪರಿವೀಕ್ಷಣಾ ಆದೇಶದಲ್ಲಿ ನಮೂದಿಸಿದ 11 ಆರೋಪಗಳ ಪೈಕಿ 06 ಆರೋಪಗಳು ಸಾಬೀತಾಗಿರುತ್ತವೆ. ಸಾಬೀತಾಗಿರುವ ಆರೋಪಗಳ ಬಗ್ಗೆ ಕ್ರಮ ಕೈಗೊಳ್ಳಲು ಸದರಿ ಜಂಟಿ ನಿಬಂಧಕರು ದಿನಾಂಕ:14-08-2024 ರಂದು ಪ್ರಕರಣ 68 ರಡಿಯಲ್ಲಿ ಆದೇಶ ಹೊರಡಿಸಿ ಸಂಘಕ್ಕೆ ನಿರ್ದೇಶನ ನೀಡಿರುತ್ತಾರೆ. ಈ ಆದೇಶಕ್ಕೆ ಸಂಘವು ದಿನಾಂಕ:21-10-2024 ರಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತದೆ. ಈ ಅನುಪಾಲನಾ ವರದಿಯನ್ನು ಪರಿಶೀಲಿಸಿ ಪ್ರಕರಣ 68 ರಡಿಯಲ್ಲಿ ನೀಡಿರುವ ನಿರ್ದೇಶನಗಳು ಪಾಲನೆಯಾಗಿಲ್ಲವೆಂದು ಸಲ್ಲಿಸಿರುವ ಅನುಪಾಲನಾ ವರದಿಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಪ್ರಕರಣ 68 ರಡಿಯಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸಂಘಕ್ಕೆ ದಿನಾಂಕ: 07-04-2025 ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಇವರು ತಿಳುವಳಿಕೆ ಪತ್ರ ಜಾರಿ ಮಾಡಿರುತ್ತಾರೆ.

ಪ್ರಕರಣ 65 ರ ಪರಿವೀಕ್ಷಣಾ ವರದಿಯಲ್ಲಿ ಉಲ್ಲೇಖಿಸಿರುವ ಅಂಶಗಳಲ್ಲಿ ಮುಖ್ಯವಾಗಿ M/s S.P.R Developers Private Limited ಇವರೊಂದಿಗೆ ಸಂಘವು ದಿನಾಂಕ:06-10-2005 ರಂದು MOU ಮಾಡಿಕೊಂಡಿದ್ದು, ಸದರಿ MOU ಪ್ರಕಾರ 126 ಎಕರೆ 26 ಗುಂಟೆ ಜಮೀನನ್ನು ಸಂಘದ ಹೆಸರಿಗೆ ವಿವಿಧ ದಿನಾಂಕಗಳಲ್ಲಿ ನೋಂದಣಿಯಾಗಿದೆ. ಸಂಘವು ರೂ.86.00 ಕೋಟಿ ಹಣವನ್ನು M/s S.P.R Developers Private Limited ರವರಿಗೆ ಪಾವತಿಸಿರುತ್ತದೆ. ಸಂಘಕ್ಕೆ ನೋಂದಣಿಯಾಗಿರುವ ಜಮೀನಿನ ಪೈಕಿ 56 ಎಕರೆ ಜಮೀನು ವಿವಾದಿತವಾಗಿದ್ದು, ಈ ವಿಷಯದಲ್ಲಿ M/s S.P.R Developers Private Limited ಹಾಗೂ ಸಂಘದ ನಡುವೆ ವಿವಾದ ಉಂಟಾಗಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಿಎಂಪಿ ಸಂಖ್ಯೆ 94/2012 ರ ವಿಚಾರಣಾ ಸಂದರ್ಭದಲ್ಲಿ ಎರಡು ಪಕ್ಷದವರು ಜಂಟಿಯಾಗಿ ಮನವಿ ಸಲ್ಲಿಸಿ ಮಧ್ಯಸ್ಥಿಕೆದಾರರನ್ನು ನೇಮಿಸಲು ಕೋರಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:22-04-2013 ರಂದು ಮಧ್ಯಸ್ಥಿಕೆಗಾರರನ್ನು ನೇಮಿಸಿರುತ್ತದೆ. ಈ ರೀತಿ ನೇಮಕಗೊಂಡ ಮಧ್ಯಸ್ಥಿಕೆದಾರರ ಸಮಕ್ಷಮದಲ್ಲಿ M/s S.P.R Developers Private Limited ರವರಿಗೆ ಸಂಘದ 126.26 ಜಮೀನನ್ನು ಅವರ ವಶಕ್ಕೆ ನೀಡುವುದು. ಅದಕ್ಕೆ ಪ್ರತಿಫಲವಾಗಿ ರೂ.185 ಕೋಟಿಗಳನ್ನು ಪಡೆಯಲು ಉಭಯತ್ರರೂ ಸಹಮತಿಸಿದ್ದಾರೆ. ತಪ್ಪಿದಲ್ಲಿ M/s S.P.R Developers Private Limited ರವರು ಸಂಘಕ್ಕೆ ಶೇ.13.5% ಬಡ್ಡಿ ದರದಲ್ಲಿ ದಿನಾಂಕ:01.04.2013 ರಿಂದ ಪಾವತಿಸಲು ಆದೇಶವಾಗಿರುತ್ತದೆ.

ಸಂಘವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ ಕಲಂ 70 ರಡಿ ಸಕ್ಷಮ ಪ್ರಾಧಿಕಾರದ ಮುಂದೆ ದಾವೆ ದಾಖಲಿಸದೆ ಮಧ್ಯಸ್ಥಿಕೆದಾರರ ಮೂಲಕ ಇತ್ಯರ್ಥಪಡಿಸಲು ನಿರ್ಧರಿಸಿದೆ.

ಆರ್ಬಿಟ್ರೇಷನ್ ಅವಾರ್ಡ್‌ನಂತೆ ಅಭಿವೃದ್ಧಿದಾರರು ರೂ. 86 ಕೋಟಿ ಅಸಲಿನ ಜೊತೆಗೆ ರೂ. 99 ಕೋಟಿ ಬಡ್ಡಿ ಸೇರಿಸಿ ರೂ.185 ಕೋಟಿ ಹಣ ಪಾವತಿಸಲು ಹಾಗೂ ಸಂಘವು ಎಲ್ಲ ಜಮೀನನ್ನು ಅಭಿವೃದ್ಧಿದಾರರಿಗೆ ಹಿಂದಿರುಗಿಸಬೇಕಾಗಿರುತ್ತದೆ. ತಪ್ಪಿದಲ್ಲಿ M/s S.P.R Developers Private Limited ರವರು ದಿನಾಂಕ:01-04-2013 ರಿಂದ ಶೇ 13.5 ರ ಬಡ್ಡಿ ಪಾವತಿಸಬೇಕಾಗಿರುತ್ತದೆ.

ಆರ್ಬಿಟ್ರೇಷನ್ ಅವಾರ್ಡ್‌ನ ಅನುಸಾರ ಆ ಅವಧಿಯಲ್ಲಿ ಅಭಿವೃದ್ಧಿದಾರರು ಸಂಘಕ್ಕೆ ರೂ.13,00,02,040/- ಪಾವತಿಸಿರುತ್ತಾರೆ. ಸಂಘವು 3 ಎಕರೆ 27 ಗುಂಟೆ ಜಮೀನನ್ನು ಅಭಿವೃದ್ಧಿದಾರರ ನಾಮಿನಿಯವರಿಗೆ ನೋಂದಣಿ ಮಾಡಿಕೊಟ್ಟಿರುತ್ತಾರೆ. ನಂತರ M/s S.P.R Developers Private Limited ರವರು ನೀಡಿರುವ ತಲಾ ರೂ. 10.00 ಕೋಟಿಯ ಎರಡು ಚೆಕ್‌ಗಳು ಅಮಾನ್ಯಗೊಂಡಿರುತ್ತವೆ. ಆರ್ಬಿಟ್ರೇಷನ್ ಅವಾರ್ಡ್‌ನಂತೆ ಜಮೀನನ್ನು ಮಾರಾಟ ಮಾಡಲು ವಿಶೇಷ ಪವರ್ ಆಫ್ ಅಟಾರ್ನಿ ನೀಡುವಂತೆ ಡೆವಲಪರ್ಸ್ ರವರು ಸಂಘದ ವಿರುದ್ಧ ಇ.ಪಿ. ದಾಖಲಿಸಿರುತ್ತಾರೆ. ನಂತರದಲ್ಲಿ ಸಂಘವು ಆರ್ಬಿಟ್ರೇಷನ್ ಅವಾರ್ಡ್‌ನಂತೆ ಹಣ ಪಾವತಿಸದ ಕಾರಣ ಅಬಿವೃದ್ಧಿದಾರರ ವಿರುದ್ಧ ಇಪಿ ಸಂಖ್ಯೆ: 1728/2015ನ್ನು ಸಿಸಿಹೆಚ್ 90 ಇಲ್ಲಿ ದಾಖಲಿಸಲಾಗಿರುತ್ತದೆ.

ದಿನಾಂಕ: 28-07-2019 ಮತ್ತು 07-03-2021 ರಂದು ನಡೆದಿರುವ ಸಂಘದ ಸಾಮಾನ್ಯ ಸರ್ವ ಸದಸ್ಯರ ಸಭೆಯಲ್ಲಿ ರಾಜೀ ಸಂಧಾನ ಮಾಡಿಕೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿದ್ದು, ಆ ಪ್ರಕಾರ ಸಂಘದ ಆಡಳಿತ ಮಂಡಳಿಯು ದಿನಾಂಕ:25-11-2021 ರಂದು ರಾಜೀ ಸಂಧಾನ ಮಾಡಿಕೊಂಡಿರುತ್ತದೆ.

ರಾಜಿ ಸಂಧಾನದ ನಂತರ ಆಡಳಿತ ಮಂಡಲಿಯು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ, 4 ಎಕರೆ 29 ಗುಂಟೆ ಜಮೀನನ್ನು M/s S.P.R Developers Private Limited ರವರಿಗೆ ನೋಂದಣಿ ಮಾಡಿಕೊಟ್ಟಿರುತ್ತದೆ. ಆದರೆ 56 ಎಕರೆ ಜಮೀನಿನ ಸಂಬಂಧ ಇರುವ ತಕರಾರರನ್ನು ಸರಿಪಡಿಸುವಲ್ಲಿ ಅಭಿವೃದ್ಧಿದಾರರು ಮತ್ತೆ ವಿಫಲರಾಗಿರುತ್ತಾರೆ.

ಈ ಆರೋಪಕ್ಕೆ ಸಂಬಂಧಿಸಿದಂತೆ, ಕಲಂ 68ರ ಆದೇಶದಲ್ಲಿ M/s S.P.R Developers Private Limited ರವರೊಂದಿಗೆ MOU ಮಾಡಿಕೊಂಡು ತಕರಾರಿರುವ ಜಮೀನನ್ನು ಸಂಘಕ್ಕೆ ನೋಂದಣಿ ಮಾಡಿಕೊಂಡಿರುವ ಆಡಳಿತ ಮಂಡಳಿಯ ಸದಸ್ಯರು ಹಾಗೂ ದಿನಾಂಕ:25-11-2021 ರಂದು ಅಭಿವೃದ್ಧಿದಾರರೊಂದಿಗೆ ರಾಜಿ ಸಂಧಾನ ಮಾಡಿಕೊಂಡಿರುವ ಅಂದಿನ ಆಡಳಿತ ಮಂಡಳಿಯ ಸದಸ್ಯರಿಂದಲೂ ಅರ್ಬಿಟ್ರೇಷನ್ ಅವಾರ್ಡ್‌ನಂತೆ ಲೆಕ್ಕಹಾಕಿ ಬಡ್ಡಿಯೊಂದಿಗೆ ವಸೂಲಾತಿ ಮಾಡಲು ಸಂಘಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ದಿನಾಂಕ:07-04-2025 ರ ನೋಟಿಸ್ ನೀಡಿದ ನಂತರ ಅರ್ಬಿಟ್ರೇಷನ್ ಅವಾರ್ಡ್‌ನ ಬಾಕಿ ಮೊತ್ತ ಹಾಗೂ ಅನ್ವಯಿಸುವ ಬಡ್ಡಿಯೊಂದಿಗೆ ಒಟ್ಟು ರೂ.644 ಕೋಟಿಗಳ ಮೊತ್ತವನ್ನು ಅಭಿವೃದ್ಧಿದಾರರಿಂದ ವಸೂಲಾತಿಗಾಗಿ ವಾಣಿಜ್ಯ ನ್ಯಾಯಾಲಯ, ಬೆಂಗಳೂರು ಇಲ್ಲಿ ಇ.ಪಿ. ಸಂಖ್ಯೆ: 504/2025ನ್ನು ಸಂಘವು ದಾಖಲಿಸಿರುತ್ತದೆ. ಪ್ರಕರಣದ ವಿಚಾರಣೆಯು ಚಾಲ್ತಿಯಲ್ಲಿದ್ದು, ಮುಂದಿನ ವಿಚಾರಣೆಯು ದಿನಾಂಕ: 05-06-2026 ರಂದು ನಿಗಧಿಯಾಗಿರುತ್ತದೆ.

ಈ ಪ್ರಕರಣದಲ್ಲಿ ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಭೂ ಖರೀದಿ, ರಾಜಿ ಸಂಧಾನ ಹಾಗೂ ವಿವಾದ ಬಗೆಹರಿಸಲು ವಿಫಲರಾಗಿರುವ, ಕಾನೂನು ಉಲ್ಲಂಘನೆ ಮಾಡಿರುವ ಆಯಾ ಅವಧಿಯ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕೆಳಕಂಡ ಕ್ರಮಗಳನ್ನು ಜರುಗಿಸಲಾಗಿದೆ.

1. ಭೂ ಖರೀದಿ ಸಂದರ್ಭದಲ್ಲಿ ಕಾನೂನು ಸಲಹೆ / ಅಭಿಪ್ರಾಯ ಪಡೆಯದೇ ಭೌತಿಕವಾಗಿ ಪರಿಶೀಲಿಸದೇ, ಜಮೀನಿನ ಕುರಿತು ಸಮಗ್ರವಾಗಿ ಗಮನ ನೀಡದೇ ಕಾನೂನು ಪರಿಪಾಲಿಸದೇ ವಿವಾದಿತ ಹಾಗೂ ತಕರಾರು ಜಮೀನನ್ನು ಸಂಘದ ಹಣವನ್ನು ವ್ಯಯಿಸಿ ಖರೀದಿಸಲು ಕಾರಣಕರ್ತರಾಗಿರುವ 2005-10 ರ ಅವಧಿಯಲ್ಲಿ ಆಡಳಿತ

ಮಂಡಳಿಯ ಸದಸ್ಯರಾಗಿದ್ದ ವ್ಯಕ್ತಿಗಳಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 109 ರ ಅಪರಾಧಕ್ಕಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಸಂಬಂಧ ಪ್ರಕರಣ 111 ರಡಿಯಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ದಿನಾಂಕ: 16-03-2026 ರಂದು ನೋಟೀಸು ಜಾರಿ ಮಾಡಿರುತ್ತಾರೆ.

2. ಖರೀದಿಸಿರುವ ಭೂಮಿಯನ್ನು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಅವರ ವಶಕ್ಕೆ ನೀಡಿದ್ದು, ಈ ಕಾನೂನುಬಾಹಿರ ವ್ಯವಹಾರಕ್ಕೆ ಕಾರಣಕರ್ತರಾಗಿರುವ, ಸಂಘಕ್ಕೆ ನಷ್ಟವನ್ನುಂಟು ಮಾಡಿರುವ 2010-15 ರ ಅವಧಿಯಲ್ಲಿ ಆಡಳಿತ ಮಂಡಳಿಯ ಸದಸ್ಯರಾಗಿದ್ದ ವ್ಯಕ್ತಿಗಳಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 109 ರ ಅಪರಾಧಕ್ಕಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಸಂಬಂಧ ಪ್ರಕರಣ 111 ರಡಿಯಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ದಿನಾಂಕ 16-03-2026 ರಂದು ನೋಟೀಸು ಜಾರಿ ಮಾಡಿರುತ್ತಾರೆ.
3. ಹಾಲಿ ಇರುವ ಸಂಘದ ಆಡಳಿತ ಮಂಡಳಿಯು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 65 ರಡಿಯಲ್ಲಿ ನಡೆಸಲಾದ ಪರಿವೀಕ್ಷಣೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸಲು ಪ್ರಕರಣ 68 ರಡಿಯಲ್ಲಿ ನೀಡಲಾದ ನಿರ್ದೇಶನಗಳನ್ನು ಯಥಾವತ್ತಾಗಿ ಪಾಲನೆ ಮಾಡಿರುವುದಿಲ್ಲ. ಸಾಕಷ್ಟು ಅವಕಾಶಗಳನ್ನು ನೀಡಿದರೂ ನಿರ್ಲಕ್ಷ್ಯ ತೋರುತ್ತಿರುವ ಈ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಪ್ರಕರಣ 29-ಸಿ ರಡಿಯಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ದಿನಾಂಕ 12-03-2026 ರಂದು ನೋಟೀಸು ಜಾರಿ ಮಾಡಿರುತ್ತಾರೆ.
4. ಸಂಘ ಮತ್ತು ಭೂ ಅಭಿವೃದ್ಧಿದಾರರ ನಡುವೆ ರಾಜಿ ಸಂಧಾನವನ್ನು ನ್ಯಾಯಾಂಗ ಪ್ರಕ್ರಿಯೆಯ ಹೊರತುಪಡಿಸಿದಂತೆ ಇತ್ಯರ್ಥಪಡಿಸಿಕೊಳ್ಳದಿರಲು, ಕಾನೂನಾತ್ಮಕವಾಗಿ ಇತ್ಯರ್ಥಪಡಿಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ದಿನಾಂಕ 12-03-2026 ರಂದು ನಿರ್ದೇಶನ ನೀಡಲಾಗಿದೆ.

M/s S.P.R Developers Private Limited ರವರಿಂದ ವಸೂಲಾತಿಗಾಗಿ ಹೂಡಿರುವ ಇ.ಪಿ. ಸಂಖ್ಯೆ: 504/2025ನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅಗತ್ಯವಾದ ಎಲ್ಲಾ ರೀತಿಯ ಕಾನೂನು ಕ್ರಮಗಳನ್ನು ಕೈಗೊಂಡು ವಸೂಲಾತಿ ಮಾಡಿಕೊಳ್ಳಲು ಸೂಚಿಸಿದೆ ಹಾಗೂ ಪ್ರಕರಣದ ಸಂಬಂಧ ಸಕ್ಷಮ ಪ್ರಾಧಿಕಾರವಾದ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಿಗೆ ನಿಯತಕಾಲಿಕವಾಗಿ ವರದಿ ಸಲ್ಲಿಸುವಂತೆ ಸಂಘಕ್ಕೆ ನಿರ್ದೇಶನ ನೀಡಲಾಗಿದೆ.

**ಸಿಒ 28 ಸಿಹೆಚ್ಎಸ್ 2026(ಇ)**

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿಯವರು**